

## ಅಮ್ಮಚ್ಚಿಯ ಭಾವಲೋಕ

ನಾಟಕ ನಿರ್ದೇಶಕಿಯಾಗಿ, ಕಂಠದಾನ ಕಲಾವಿದೆಯಾಗಿ ಗುರ್ತಿಸಿಕೊಂಡಿದ್ದ ಚಂಪಾಶೆಟ್ಟಿ ಈಗ ಸಿನಿಮಾ ನಿರ್ದೇಶನದ ಬೂಟಿನೊಳಗೆ ಕಾಲಿರಿಸಿದ್ದಾರೆ. ಕನ್ನಡದ ಹಿರಿಯ ಲೇಖಕಿ ವೈದೇಹಿ ಅವರ ಮೂರು ಕಥೆಗಳನ್ನು ಆಧರಿಸಿ ಅವರೇ ನಿರ್ದೇಶಿಸಿದ್ದ 'ಅಕ್ಕು' ನಾಟಕ ಹಲವು ಪ್ರದರ್ಶನಗಳನ್ನು ಕಂಡಿತ್ತು. ಅದೇ ನಾಟಕವನ್ನು ಕೊಂಚ ಬದಲಾವಣೆಯೊಂದಿಗೆ 'ಅಮ್ಮಚ್ಚಿಯೆಂಬ ನೆನಪು' ಎಂಬ ಹೆಸರಿನಲ್ಲಿ ಸಿನಿಮಾ ಮಾಡಿದ್ದಾರೆ.

ಹೆಣ್ಣಿನ ಅಂತರಂಗದ ಅನಾವರಣ ವೈದೇಹಿ ಕಥೆಗಳ ಮೂಲದ್ರವ್ಯ. ಈ ಒಳಸುಳಿಗಳೇ ಚಂಪಾಶೆಟ್ಟಿ ಅವರನ್ನು ಕಲಕಿವೆ. 'ಹೆಣ್ಣು ಯಾವತ್ತಿಗೂ ಪುರುಷನ ಮೇಲೆ ಅವಲಂಬಿತಳಾಗಿರಬೇಕು ಎಂದು ಸಮಾಜ ಬಯಸುತ್ತಿರುತ್ತದೆ. ಆದರೆ ಅವಳಿಗೆ ತನ್ನದೇ ಆದ ಒಂದು ಖಾಸಗೀ ಜಗತ್ತು ಇರುತ್ತದೆ. ಆ ಜಗತ್ತು ಅವಳ ಅಸ್ಮಿತೆಯೂ ಆಗಿರುತ್ತದೆ. ಅದನ್ನು ಅನಾವರಣಗೊಳಿಸುವುದೇ ಈ ಸಿನಿಮಾದ ಉದ್ದೇಶ' ಎನ್ನುವ ಅವರು, 'ಈ ಸಿನಿಮಾದ ಅಮ್ಮಚ್ಚಿ ಎಲ್ಲರಿಗೂ ಎಲ್ಲ ಕಾಲಕ್ಕೂ ಪ್ರಸ್ತುತವಾಗುವಂಥ ಹೆಣ್ಣು' ಎನ್ನುತ್ತಾರೆ.

ಚಿತ್ರದ ಜೀವಾಳ ಕುಂದಾಪುರ ಭಾಷೆ. ಸಂಭಾಷಣೆಯನ್ನು ವೈದೇಹಿ ಅವರೇ ಬರೆದಿದ್ದಾರೆ. ರಾಜ್ ಬಿ. ಶೆಟ್ಟಿ ಈ ಚಿತ್ರದಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ನಕಾರಾತ್ಮಕ ಪಾತ್ರವೇ ಆದರೂ ಆ ಪಾತ್ರದ ಗುಣಗಳಿಗೆ ಸಂದರ್ಭವೇ ಕಾರಣ ಎನ್ನುವುದು ಅವರ ವಿವರಣೆ.

ಉಳಿದಂತೆ ವೈಜಯಂತಿ ಅಡಿಗ ಅಮ್ಮಚ್ಚಿಯ ಪಾತ್ರಕ್ಕೆ ಜೀವ ತುಂಬಿದ್ದಾರೆ. ದಿಯಾ ಪಾಲಕ್ಕಲ್, ಗೀತಾ ಸುರತ್ಕಲ್, ಶೃಂಗೇರಿ ರಾಮಣ್ಣ, ರಾಧಾಕೃಷ್ಣ ಉರಾಳ, ವಿಶ್ವನಾಥ ಉರಾಳ, ಚಂದ್ರಹಾಸ ಉಳ್ಳಾಲ ಮುಂತಾದವರು ಬಣ್ಣ ಹಚ್ಚಿದ್ದಾರೆ. 'ಮಫ್ತಿ' ಚಿತ್ರಕ್ಕೆ ಛಾಯಾಗ್ರಹಣ ಮಾಡಿದ್ದ ನವೀನ್ ಕುಮಾರ್, ಅಮ್ಮಚ್ಚಿಯ ಭಾವಲೋಕವನ್ನು ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರೆ. ದಕ್ಷಿಣ ಕನ್ನಡದ ಪಡುಬಿದ್ರೆಯ ಸಮೀಪದ ಸ್ಥಳಗಳಲ್ಲಿ ಚಿತ್ರೀಕರಣ ಮಾಡಲಾಗಿದೆ.

## ಕೆಜಿಎಫ್ ಕಥೆ ಏನಾಯ್ತು?



'ಕೆಜಿಎಫ್' ಎಂದು ಯಾರ ಮುಂದಾದರೂ ಹೇಳಿದರೆ 'ಯಾವಾಗ ಮುಗೀತದಂತೆ?' ಎಂಬ ಮರುಪ್ರಶ್ನೆ ಸಿದ್ಧವಾಗಿಯೇ ಇರುತ್ತದೆ. ಆ ಪ್ರಶ್ನೆಯ ಧಾಟಿಯಲ್ಲಿಯೇ 'ಇದು ಸದ್ಯಕ್ಕೆ ಮುಗಿಯುವುದಿಲ್ಲ ಬಿಡಿ' ಎಂಬ ಉತ್ತರವೂ ಇರುತ್ತದೆ.

ಪ್ರಶಾಂತ್ ನೀಲ್ ನಿರ್ದೇಶನದ ಯಶ್ ನಾಯಕನಟನಾಗಿ ನಟಿಸಿರುವ ಈ ಚಿತ್ರ ಶುರುವಾಗಿ ಎರಡೂವರೆ ವರ್ಷ ಆಗಿಹೋಯ್ತು. ಮತ್ತೆ ಮತ್ತೆ ಯಾವ್ಯಾವುದೋ ಕಾರಣಕ್ಕೆ ಸುದ್ದಿಯಾಗುತ್ತಲೇ ಇದೆಯೇ ವಿನಾ ಬಿಡುಗಡೆಯಾಗುವ ಲಕ್ಷಣಗಳು ಇದುವರೆಗೆ ಗೋಚರಿಸಿರಲಿಲ್ಲ. ಆದರೆ ಇದೀಗ ನ.16ಕ್ಕೆ ಬಿಡುಗಡೆ ಮಾಡೇ ಮಾಡ್ತೀವಿ ಎಂದು ಚಿತ್ರತಂಡ ಆಶ್ವಾಸನೆ ಕೊಟ್ಟಿದೆ. ಇದಕ್ಕೆ ಪೂರ್ವಭಾವಿಯಾಗಿ ಅಕ್ಟೋಬರ್‌ನಲ್ಲಿ ಟ್ರೇಲರ್ ಬಿಡುಗಡೆ ಮಾಡುವುದಾಗಿಯೂ ಹೇಳಿಕೊಂಡಿದೆ.

'ಕೆಜಿಎಫ್ ಕಥೆ ಏನಾಯ್ತು?' ಎಂದು ಕೇಳುವವರಿಗೆ ಉತ್ತರಿಸಿರುವ ರೀತಿಯಲ್ಲಿ ನಿರ್ದೇಶಕ ಪ್ರಶಾಂತ್ ನೀಲು ಕಥೆಯ ಎಳೆಯನ್ನೂ ಬಿಟ್ಟುಕೊಟ್ಟಿದ್ದಾರೆ. ದುಷ್ಟ ವ್ಯಕ್ತಿಯ ಹಿಡಿತಕ್ಕೆ ಚಿನ್ನದ ಗಣಿ ಸಿಕ್ಕರೆ ವ್ಯವಸ್ಥೆಯಲ್ಲಿ ಎಂಥ ದುರಂತಗಳು ಸಂಭವಿಸುತ್ತವೆ ಎನ್ನುವುದೇ ಈ ಚಿತ್ರದ ಎಳೆಯಂತೆ. ಅಂಡರ್‌ವರ್ಲ್ಡ್ ಲಿಂಕ್ ಕೂಡ ಇದೆಯಂತೆ. ತಾಯಿಯ ಅಣತಿಯಂತೆಯೇ ನಾಯಕ ಭೂಗತಲೋಕ ಪ್ರವೇಶಿಸುತ್ತಾನೆ. ಅಂದಮೇಲೆ ಭೂಗತಲೋಕದ ದುಷ್ಟರನ್ನು ನಾಯಕ ಬಗ್ಗುಬಡಿಯುವ ಮುಂದಿನ ಕಥೆಯನ್ನು ನಾವು ಸುಲಭವಾಗಿಯೇ ಊಹಿಸಿಕೊಳ್ಳಬಹುದು.

ಎರಡೂವರೆ ವರ್ಷಗಳ ಅವಧಿ ಯಶ್ ಅಭಿಮಾನಿಗಳ ನಿರೀಕ್ಷೆಯೂ ಚಿನ್ನದ ಬೆಲೆಯಷ್ಟೇ ಎತ್ತರಕ್ಕೆ ಏರಿದೆ.

